ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 45/2019 .

ಪ್ರಾ.ಸಾ. : 5
ಚಾ.ಸಾ. : 3

| | | |
|---|---|---|
| ಹೆಸರು | : | ಎ. ಕೆ. ಸೋನಿಕುಮಾರ್ |
| ತಂದೆಯ ಹೆಸರು | : | ಎ. ಎಂ. ಕರುಂಬಯ್ಯ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಿಳಾಸ | : | ಬಾಡಗರಕೇರಿ |

... ........................................................................................................... ...

ದಿನಾಂಕ 16 ನೇ ಮಾರ್ಚ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ಚಾಸಾ 1, 2 ಪರಿಚಯ. ಆರೋಪಿತರು ಪರಿಚಯ. ದಿ. 04.02.2018 ರಂದು ಸಂಜೆ 6.30 ಗಂಟೆಗೆ ನಾನು ಮತ್ತು ಚಾಸಾ 2 ಬಿರುನಾಣಿಯಲ್ಲಿ ಇದ್ದೆವು ಆಗ ಆರೋಪಿ 1 ಮತ್ತು ಚಾಸಾ 1 ಜಗಳ ಆಡುತ್ತಿದ್ದರು. ಆರೋಪಿ 1 ಬಲಗೈ ಯಿಂದ ಚಾಸಾ 1 ರವರ ತಲೆಗೆ ಹೊಡೆದರು. ಆರೋಪಿ 2 ದೊಣ್ಣೆ ತೆಗೆದುಕೊಂಡು ಬಂದು ಚಾಸಾ 1 ರವರ ಹೊಟ್ಟೆಗೆ ಹೊಡೆದರು. ಆರೋಪಿ 2 ಬಲಗಾಲಿನಿಂದ ಚಾಸಾ 1 ರವರ ಹೊಟ್ಟೆಗೆ ಹೊಡೆದರು. ನಾನು ಮತ್ತು ಚಾಸಾ 2 ಅವರನ್ನು ಸಮಾಧಾನಪಡಿಸಿ ಜಗಳ ಬಿಡಿಸಿದೆವು.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ : -

ಚಾಸಾ 1 ರವರ ಕಾಫಿ ಕಣದಲ್ಲಿ ಇದ್ದಾಗ ಗಲಾಟೆ ಆಯಿತು ಎಂದರೆ ಸರಿ. ಆರೋಪಿ 1 ಚಾಸಾ 1 ರವರನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ.

ಆರೋಪಿ 1 ಚಾಸಾ 1 ರವರನ್ನು ಕುರಿತು ಬೆಂಗಳೂರಿನಿಂದ ರೌಡಿಗಳನ್ನು ಕರೆಸಿ ಹೊಡೆಸುತ್ತೇನೆ ಎಂದು ಹೇಳಿದರು ಹಾಗೂ ಕೊಲೆ ಬೆದರಿಕೆ ಹಾಕಿದರು ಎನ್ನುತ್ತಾರೆ. ಮು. ಮಾಲನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು :- ಆರೋಪಿ 1 ರವರಿಂದ :-**

ನನ್ನ ಮನೆಯಿಂದ ಆರೋಪಿ 1 ರವರ ನಿಮ್ಮ ಮನೆ 7 ಕಿ. ಮೀ ದೂರ ಇದೆ ಎನ್ನುತ್ತಾರೆ. ನಾನು ಮತ್ತು ಚಾಸಾ 2, ಸಂಜೆ 6 ಗಂಟೆಗೆ ಬಿರುನಾಣಿ ಟೌನ್ ನಿಂದ ಚಾಸಾ 1 ರವರ ಕಣಕ್ಕೆ ಬರುತ್ತಿದ್ದೆವು ಏಕೆಂದರೆ ಚಾಸಾ 1 ನನ್ನ ಅತ್ತೆಯ ಮಗ ಎನ್ನುತ್ತಾರೆ. ನನ್ನ ಮೊಬೈಲ್ ಸಂಖ್ಯೆ 9481247444. ಚಾಸಾ 2 ರವರ ಮೊಬೈಲ್ ಸಂಖ್ಯೆ ಗೊತ್ತಿಲ್ಲ ಅದು ಬದಲಾಗಿದೆ ಎನ್ನುತ್ತಾರೆ. ದಿ. 04.02.2018 ರಂದು ಚಾಸಾ 1 ರವರ ಕಣಕ್ಕೆ ಸಂಜೆ 6.30 ಕ್ಕೆ ಬಂದೆವು. ಸಂಜೆ 4 ಗಂಟೆಯಿಂದ ನಾನು ಮತ್ತು ಚಾಸಾ 2 ಸಂಜೆ 6.30 ತನಕ ನನ್ನ ಅತ್ತೆ ಮನೆ ಬಿರುನಾಣಿಯಲ್ಲಿದ್ದೆವು. ನಾನು ಹೇಳಿದಂತೆ ಅಲ್ಲಿ ಕಾಫಿ ಕಣ ಇಲ್ಲ ಎಂದರೆ ಸರಿಯಲ್ಲ. ಕಾಫಿ ಕಣಕ್ಕೆ ನನ್ನ ಅತ್ತೆ ಮಗ ರಾಜೇಂದ್ರ ಕಾಫಿ ಎಸ್ಟೇಟ್ ಒಂದು ಎಕರೆ 45 ಸೆಂಟ್ ಎಂದು ದಾಖಲಾತಿ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಕಾಫಿ ತೋಟ ಅರ್ಧ ಎಕರೆ ಮಾತ್ರ ಇದೆ , ಒಂದು ಎಕರೆ 45 ಸೆಂಟ್ ನಲ್ಲಿ ಕಾಫಿ ತೋಟ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಕಾಫಿ ಕಣ ಎಂದು ಹೇಳುವ ಸ್ಥಳ ನನ್ನ ಕುಟುಂಬದ ಸ್ಥಳ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯವರು Pumping station ಮಾಡಲು ಅದನ್ನು ಬಳಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ Pumping station with 5 H. P. Pumping machine ಇದೆ ಎಂದರೆ ಅದು ಗದ್ದೆಯಲ್ಲಿ ಇದೆ ಎನ್ನುತ್ತಾರೆ. ಚಾಸಾ 1 ಮೊದಲು ಮೀನು ವ್ಯಾಪಾರ ಮಾಡುತ್ತಿದ್ದರು ಎನ್ನುತ್ತಾರೆ. ಚಾಸಾ 1 ರವರಿಗೆ ಗೋಣಿಕೊಪ್ಪದಲ್ಲಿ B.C. timber mill ಇದೆ ಎಂದರೆ ನನಗೆ ಗೊತ್ತಿಲ್ಲ ಆದರೆ ಕಾಫಿ ವ್ಯಾಪಾರವನ್ನು ಚಾಸಾ 1 ರವರು ಮಾಡುತ್ತಾರೆ.

ದಿ. 13.04.2018 ರಂದು ನಾನು ಪೊಲೀಸರಿಗೆ ನನ್ನ ವಿರುದ್ಧ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನನ್ನ ಹೇಳಿಕೆಯಲ್ಲಿರುವ ಎಲ್ಲ ವಿಚಾರಗಳನ್ನು ನಾನು ಹೇಳಿದ್ದೇನೆ. ಪೊಲೀಸರು ನನಗೆ ನಾನು ನೀಡಿದ್ದೇನೆ ಎಂದು ಹೇಳುವ ದೂರುಗಳನ್ನು ತೋರಿಸಿದ್ದಾರೆ ಎನ್ನುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಹೇಳಿರುವಂತೆ ನೀರನ್, ನನ್ನ ಅತ್ತೆ, ನಿಖಿಲ್ ಮೇಲೆ ಆರೋಪಿ 1 ಆದ ನೀವು ದೂರು ನೀಡಿದ್ದೀರಿ ಎನ್ನುತ್ತಾರೆ.

ನೀರನ್ ಅಣ್ಣ, ಹಾಗೂ ನಿಖಿಲ್ ತಮ್ಮ ಎನ್ನುತ್ತಾರೆ. ಚರಣ್ ಕುಮಾರ್ ಹಾಗೂ ರಾಜೇಂದ್ರರವರ ವಿರುದ್ಧ ನೀವು ದೂರು ನೀಡಿದ್ದೀರಿ ಎನ್ನುತ್ತಾರೆ.

ನಾನು ಹೇಳಿದಂತೆ ಆರೋಪಿ 1 ಆದ ನಾನು ಚಾಸಾ 1 ರವರಿಗೆ ಹಲ್ಲೆ ಮಾಡಿರುವುದಿಲ್ಲ, ಬೈದಿರುವುದಿಲ್ಲ, ಅಡ್ಡಗಟ್ಟಿರುವುದಿಲ್ಲ ಅದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಚರಣ್‌ಕುಮಾರ್ ಹಾಗೂ ರಾಜೇಂದ್ರರವರ ಕುಟುಂಬಕ್ಕೆ ನಾನು ಸಹ ಸೇರಿದ್ದೇನೆ ಎಂದರೆ ಸರಿ. ನನ್ನ ತಂದೆಯ ತಂಗಿಯ ಮಕ್ಕಳು ಚರಣ್‌ಕುಮಾರ್ ಹಾಗೂ ರಾಜೇಂದ್ರ ಎಂದರೆ ಸರಿ. ನಾನು, ಚರಣ್ ಕುಮಾರ್ ಹಾಗೂ ರಾಜೇಂದ್ರ ಶಾಮೀಲಾಗಿ ಪೊಲೀಸರಿಗೆ ಹಣ ನೀಡಿ ದೂರನ್ನು ನೀಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> :- ಆರೋಪಿ 2 ರವರ ಪರ ವಕೀಲರಿಂದ ಃ-

ನಾನು ಹೇಳುತ್ತಿರುವ ಕಣಕ್ಕೆ ಹಾಗೂ ಚಾಸಾ 1 ರವರ ಮನೆಗೆ 100 ಮೀ ದೂರ ಎನ್ನುತ್ತಾರೆ. ಕಣಕ್ಕೆ ಬರುವಂತೆ ನನಗೆ ಯಾರು ಸೂಚಿಸಲಿಲ್ಲ, ಚಾಸಾ 1 ಕಣದಲ್ಲಿ ಇದ್ದ ಕಾರಣ ನಾನು ಅಲ್ಲಿಗೆ ಬಂದೆ ಎನ್ನುತ್ತಾರೆ. ನಾನು ಹೋಗುವಷ್ಟರಲ್ಲಿ ಗಲಾಟೆ ಮುಗಿದಿರಲಿಲ್ಲ, ಗಲಾಟೆ ನಡೆಯುತ್ತಿತ್ತು ಎನ್ನುತ್ತಾರೆ. ಆರೋಪಿ 1 ಮೊದಲು ಚಾಸಾ 1 ರವರಿಗೆ ಹೊಡೆದರು ಅದನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಆಗ ಚಾಸಾ 1 ಕಿರುಚಾಡಿದರು. ಚಾಸಾ 1 ನೆಲಕ್ಕೆ ಬೀಳಲಿಲ್ಲ. ಚಾಸಾ 1 ರವರ ಬಟ್ಟೆ ಸ್ವಲ್ಪ ಹರಿದಿತ್ತು, ಈ ವಿಚಾರವನ್ನು ನಾನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನನಗೆ ಆರೋಪಿತರ ಹೊಡೆಯಲಿಲ್ಲ. ನನ್ನ ಬಳಿ ಮೊಬೈಲ್ ಇತ್ತು ಆದರೆ ಅದರಲ್ಲಿ ಕ್ಯಾಮೆರಾ ಇರಲಿಲ್ಲ.

ಕಾಫಿ ಕಣ 60 ಅಡಿ ಅಗಲ, 70 ಅಡಿ ಉದ್ದ ಎನ್ನುತ್ತಾರೆ. ಕಣದ ಸುತ್ತ ಗೋಡೆ ಇರುವುದಿಲ್ಲ. ನಾನು ಹೇಳಿದಂತೆ ಅಲ್ಲಿ ಕಣ ಇಲ್ಲ ಎಂದರೆ ಸರಿಯಲ್ಲ. ನಾನು ಅಲ್ಲಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ನನ್ನ ಸಂಬಂಧಿಯಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ** :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)